ಕೋಲಾರ ಜಿಲ್ಲೆಯಲ್ಲಿ ಗ್ರಾಮಪಂಚಾಯತಿಗಳಿಗೆ ಒದಗಿಸಿರುವ ಅನುದಾನ

1079(1576)

ಶ್ರೀ. ಜಿ.ವಿ.ಶ್ರೀ ರಾಮರೆಡ್ಡಿ, (ಬಾಗೇಪಲ್ಲಿ.)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗ್ರಾಮ ಪಂಚಾಯತಿಗಳಿಗೆ ಒದಗಿಸಲಾದ ಅನುದಾನವೆಷ್ಟು ?

ಆ) ಇದನ್ನು ಎಷ್ಟು ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು ?

ಇ) ಕೋಲಾರ ಜಿಲ್ಲೆಗೆ ಪ್ರಸಕ್ತ ಈ ಸಾಲಿನಲ್ಲಿ ಒದಗಿಸಲಾದ ಅನುದಾನ ಎಷ್ಟು ?

ಶ್ರೀ ಎಂ.ಪಿ.ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವರು).

ಅ) ಗ್ರಾಮ ಪಂಚಾಯತಿಗಳಿಗೆ ಈ ಕೆಳಗಿನಂತೆ ಅನುದಾನ ಒದಗಿಸಲಾಗುತ್ತಿದೆ :

(ಅ) ವರ್ಷಕ್ಕೆ ರೂ.1.00 ಲಕ್ಷ ಪ್ರತಿ ಗ್ರಾಮ
ಪಂಚಾಯತಿಗೆ ತಲಾನುದಾನ ರೂ.5681.89(ಲಕ್ಷ)

(ಆ) ಜಿ.ಜಿ.ಎಸ್. ಯೋಜನೆ
ಅಡಿಯಲ್ಲಿ ರೂ. 9383.43 -"-

(ಇ) ಹತ್ತನೆ ಹಣಕಾಸು
ಆಯೋಗದ ಶಿಫಾರಸ್ಸಿನಂತೆ ರೂ.2992.50 -"-

ಆ) (ಅ) ಮತ್ತು (ಇ) ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು. (ಆ) ಎರಡು ಕಂತುಗಳಲ್ಲಿ ಬಿಡುಗಡೆಮಾಡಲಾಗುವುದು.

ಇ) (ಅ) ರೂ.306.00(ಲಕ್ಷಗಳು)

(ಆ) ರೂ.701.68 (-"-)

(ಇ) ರೂ.154.58 (-"-)

ಭಟ್ಕಳ ಕ್ಷೇತ್ರದಲ್ಲಿ ಗ್ರಾಮಪಂಚಾಯತಿ ಗ್ರಂಥಾಲಯ.

1080(1630)

ಶ್ರೀ ಶಿವಾನಂದ ನಾಯಕ್ (ಭಟ್ಕಳ)

ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ಕ್ಷೇತ್ರದಲ್ಲಿ ಎಲ್ಲೆಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

ಆ) 1999-2000ನೇ ಸಾಲಿನಲ್ಲಿ ಸರ್ಕಾರ ಭಟ್ಕಳ ಕ್ಷೇತ್ರದಲ್ಲಿ ಎಲ್ಲೆಲ್ಲಿ ಗ್ರಂಥಾಲಯ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀ ಆರ್. ಕೃಷ್ಣಪ್ಪ. (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು)

ಅ) ಭಟ್ಕಳ ಕ್ಷೇತ್ರದಲ್ಲಿ ಈ ಕೆಳಗಿನ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ